ದಿಃ **07.02.2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 1, 3 ರಿಂದ 6 ನೇ ಆರೋಪಿತರ ಪರ ಶ್ರೀ ಎಸ್ ಬಿ ವಕೀಲರಿಂದಃ**

1. ನನ್ನ ಮನೆ ಹೆಚ್ ಎ ಎಲ್ ಕಡೆಗೆ ಇದೆ ಎಂದರೆ ಸರಿಯಲ್ಲ. ಈ ದಿನ ನನ್ನ ಆಧಾರ್ ಕಾರ್ಡ್ ತಂದಿಲ್ಲ. ನನ್ನ ಆಧಾರ್ ಕಾರ್ಡಿನಲ್ಲಿ, ಚುನಾವಣ ಗುರುತಿನ ಚೀಟಿಯಲ್ಲಿ ನನ್ನ ವಿಳಾಸ ಹೆಚ್ ಎ ಎಲ್ ಎಂದು ಇದೆ ಎಂದರೆ ಸರಿಯಲ್ಲ.

2. ದಿಃ28.02.2012 ರಂದು ರಾತ್ರಿ 11 ರಿಂದ 12 ಘಂಟೆ ಅವಧಿಯಲ್ಲಿ ಪ್ರಾಸಾ-2 ಆನಂದ್ ಇವರು ವೆಂಕಟೇಶ್ವರ ಆಸ್ಪತ್ರೆಯಲ್ಲಿ ಇದ್ದರು. ಆನಂದ್ ಇವರು ಲೈವ್ ಹಂಡ್ರೆಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ನನಗೆ ಗೊತ್ತಿಲ್ಲ. ಆ ದಿನ ರಾತ್ರಿ 11 ರಿಂದ 12 ಘಂಟೆ ಸಮಯದಲ್ಲಿ ಪ್ರಾಸಾ-2 ಇವರು ಲೈವ್ ಹಂಡ್ರೆಡ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು ಎಂದರೆ ಸರಿಯಲ್ಲ. ರಾತ್ರಿ 12 ರಿಂದ 2 ಘಂಟೆಯ ಅವಧಿಯಲ್ಲಿ ಪ್ರಾಸಾ-2 ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ.

3. ಪ್ರದೀಪ್ ಎಂಬ ವ್ಯಕ್ತಿ ನನಗೆ ಗೊತ್ತಿಲ್ಲ. ದಿಃ 28.02.2012 ಮತ್ತು ದಿಃ29.02.2012 ರ ರಾತ್ರಿ 12 ಘಂಟೆಯಿಂದ 2 ಘಂಟೆ ಅವಧಿಯಲ್ಲಿ ನೀವು ಎಲ್ಲಿದ್ದಿರಿ ಎಂದರೆ ಸಾಕ್ಷಿದಾರರು ನಾನು ರಾತ್ರಿ 12 ಘಂಟೆಗೆ ವೆಂಕಟೇಶ್ವರ ಆಸ್ಪತ್ರೆ ಬಿಟ್ಟು ಮನೆಗೆ ಹೋದೆ ಎನ್ನುತ್ತಾರೆ. ನಾನು ಮನೆಗೆ ಹೋಗಿದ್ದರಿಂದ ಪ್ರಾಸ-1 ಮತ್ತು 3 ರಾತ್ರಿ 12 ರಿಂದ 2 ಘಂಟೆ ಅವಧಿಯಲ್ಲಿ ಎಲ್ಲಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ರಾತ್ರಿ 12 ರಿಂದ 2 ಘಂಟೆಯವರೆಗೆ ಪ್ರಾಸಾ-1 ಮತ್ತು 3 ಸ್ಪರ್ಶ ಆಸ್ಪತ್ರೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ.

4. ದಿಃ28.02.2012 ರಂದು ಪೋಲಿಸರನ್ನು ನೋಡಿದ್ದೀರಾ ಎಂದರೆ ಸಾಕ್ಷಿದಾರರು ನೋಡಿದ್ದೇನೆ ಎನ್ನುತ್ತಾರೆ. ಎಲ್ಲಿ ಮತ್ತು ಯಾವಾಗ ಎಂದರೆ ಸಾಕ್ಷಿದಾರರು ರಾತ್ರಿ 11 ಘಂಟೆಗೆ ಹೆಬ್ಬಗೋಡಿ ಪೋಲಿಸ್ ಠಾಣೆಯಲ್ಲಿ ಎನ್ನುತ್ತಾರೆ. ಆಗ ನಾನು ಹೆಬ್ಬಗೋಡಿ ಠಾಣೆಯಲ್ಲಿ 10-15 ನಿಮಿಷ ಇದ್ದೆ. ಆಗ ಪೋಲಿಸರು ನನ್ನನ್ನು ವಿಚಾರಿಸಿದ್ದಾರೆ. ಆಗ ನನ್ನ ಹೇಳಿಕೆಯನ್ನು ಬರೆದುಕೊಂಡಿಲ್ಲ. ಆಗ ಠಾಣೆಯಲ್ಲಿ ಪೋಲಿಸರು ನನ್ನ ಯಾವುದೇ ಸಹಿಗಳನ್ನು ಪಡೆದಿಲ್ಲ. ನನ್ನ ಮನೆಯಿಂದ ಹೆಬ್ಬಗೋಡಿ ಪೋಲಿಸ್ ಠಾಣೆ ಅರ್ಧ ಕಿಮೀ

ದೂರದಲ್ಲಿದೆ. ನಾನು ವೆಂಕಟೇಶ್ವರ ಆಸ್ಪತ್ರೆಯಿಂದ ಹೆಬ್ಬಗೋಡಿ ಪೋಲಿಸ್ ಠಾಣೆಗೆ ಹೋಗಿದ್ದೆ. ಒಬ್ಬ ಪೋಲಿಸ್ ಸಿಬ್ಬಂದಿ ನನಗೆ ಠಾಣೆಗೆ ಬರುವಂತೆ ಹೇಳಿದ್ದರಿಂದ ನಾನು ಆಸ್ಪತ್ರೆಯಿಂದ ಠಾಣೆಗೆ ಹೋದೆ. ನಾನು ಆಸ್ಪತ್ರೆಗೆ ಹೋದಾಗ ಅಲ್ಲಿ ಪೋಲಿಸರು ಇದ್ದರು. ಇಬ್ಬರು ಅಥವಾ ಮೂವರು ಪೋಲಿಸರು ಅಲ್ಲಿ ಇದ್ದರು. ಆಸ್ಪತ್ರೆಯಲ್ಲಿ ಪೋಲಿಸರು ನನ್ನನ್ನು ವಿಚಾರಿಸಿಲ್ಲ.

5. ಠಾಣೆಯಲ್ಲಿ ಪೋಲಿಸರಿಗೆ ನಾನು ಘಟನೆಯನ್ನು ನೋಡಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ಆಗಿದ್ದನ್ನು ನಾನು ನೋಡಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ ನಾನು ನೋಡಿದ ಇಬ್ಬರು - ಮೂವರು ಪೋಲಿಸರು ನಾನು ಪೋಲಿಸ್ ಠಾಣೆಗೆ ಹೋಗುವಾಗ ನನ್ನೊಂದಿಗೆ ಬಂದಿಲ್ಲ. ಅವರು ಆಸ್ಪತ್ರೆಯಲ್ಲಿಯೇ ಇದ್ದರು. ಠಾಣೆಗೆ ಆಗ ನನೊಬ್ಬನೇ ಹೋದೆ.

6. ಮರುದಿನ ಪೋಲಿಸರು ನನ್ನನ್ನು ವಿಚಾರಿಸಿಲ್ಲ. ನಾನು ಅವರನ್ನು ಭೇಟಿಯಾಗಿಲ್ಲ. 15 ದಿವಸದ ನಂತರ ಪೋಲಿಸರು ಠಾಣೆಗೆ ಕರೆಸಿ ನನ್ನನ್ನು ವಿಚಾರಿಸಿದ್ದಾರೆ. ಆಗ ಠಾಣೆಯಲ್ಲಿ ಆರೋಪಿತರೆಲ್ಲಾ ಇದ್ದರು ಮತ್ತು ಪೋಲಿಸರು ಅವರನ್ನು ತೋರಿಸಿದ್ದರು. ಆಗ ಪ್ರಾಸಾ-1, 3 ಮತ್ತು ನನ್ನ ಇಬ್ಬರು ಸ್ನೇಹಿತರು ಸಹ ಠಾಣೆಗೆ ಬಂದಿದ್ದರು. ಪ್ರಾಸಾ-1 ಮತ್ತು 3 ಇವರು ನಾವು ಠಾಣೆಗೆ ಹೋಗುತ್ತಿದ್ದೇವೆ ಸಾಕ್ಷಿದಾರರನ್ನು ಕರೆದುಕೊಂಡು ಬಾ ಎಂದುಹೇಳಿದ್ದಾರೆ, ನೀವು ಬನ್ನಿ ಎಂದು ನನ್ನನ್ನು ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ.

7. ಠಾಣೆಯಲ್ಲಿ ಪೋಲಿಸರು 1, 2, 4 ಮತ್ತು 5 ನೇ ಆರೋಪಿತರನ್ನು ತೋರಿಸಿ ಅವರ ಹೆಸರು ರಂಜಿತ್, ಶಿವು, ಸಂದೀಪ್ ಮತ್ತು ನಾಗರಾಜ ಎಂದು ತಿಳಿಸಿದರು ಎಂದರೆ ಸರಿ. ಸದರಿ ಆರೋಪಿತರನ್ನು ತೋರಿಸಿದಾಗ ಪೋಲಿಸರು ಠಾಣೆಯಲ್ಲಿ ಈಗ ತೋರಿಸಿದ ಮು.ಮಾ-6 ಮತ್ತು 7 ಇವು ಇದ್ದವು ಎಂದರೆ ಸರಿ.

8. ಘಟನೆಯ ಮರುದಿನ ನಾನು ಸ್ಪರ್ಶ್ ಆಸ್ಪತ್ರೆಗೆ ಹೋದಾಗ ಪ್ರಾಸಾ-2 ಆನಂದ್ ಇವರು ತಾನು ರಾತ್ರಿ ಲೈವ್ ಹಂಡ್ರೆಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನನಗೆ ಹೇಳಿದ್ದಾರೆ ಎಂದರೆ ಸರಿಯಲ್ಲ.

9. 15 ದಿವಸ ಬಿಟ್ಟು ಪೋಲಿಸ್ ಠಾಣೆಗೆ ಹೋದಾಗ ನನ್ನನ್ನು ವಿಚಾರಿಸಿದ್ದಾರೆ. ಆದರೆ ಹೇಳಿಕೆ ದಾಖಲಿಸಿಕೊಂಡ ಬಗ್ಗೆ ಗೊತ್ತಿಲ್ಲ. ಆಗ ಸಹ ನಾನು ಪೋಲಿಸರಿಗೆ ಘಟನೆಯನ್ನು ನಾನು ನೋಡಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

10. ಪ್ರಾಸಾ-1 ರಿಂದ 3 ನನ್ನ ಸ್ನೇಹಿತರಾದ್ದರಿಂದ ಅವರ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜನತಾ ಕಾಲೋನಿ ಬೊಮ್ಮಸಂದ್ರದ ವಾಸಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 2, 7 ಮತ್ತು 9 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು